ಒ ಎಸ್ 70/2023 ಪಿ.ಡಬ್ಲ್ಯೂ 1

ಇಂದು ದಿಃ 30.07.2024 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಿ ಎನ್ ಎಸ್ ವಕೀಲರಿಂದಃ

ಪ್ರಕರಣ ದಾಖಲು ಮಾಡುವ ಪೂರ್ವದಲ್ಲಿ ನಮ್ಮ ಕುಟುಂಬದ ಪೂರ್ವಜರು ದಾವಾ ಆಸ್ತಿಗೆ ಸಂಬಂಧಪಟಟಂತೆ ಮಾಡಿದ ವ್ಯವಹಾರ ತಿಳಿದುಕೊಂಡು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ಯಾವ ವರ್ಷದಿಂದ ಯಾವ ವರ್ಷದವರೆಗೆ ವ್ಯವಹಾರ ಮಾಡಿದ್ದಾರೆ ಎಂದು ದಾಖಲೆ ನೋಡಿ ತಿಳಿದುಕೊಂಡಿದ್ದೇನೆ. ನನ್ನ ಪೂರ್ವಜರಾದ ರಘುಪತಿ ನಾಯಕ ಎನ್ನುವವರನ್ನು ನಾನು ನೋಡಿಲ್ಲ. ಈ ದಾವೆಯ 1 ನೇ ವಾದಿ ರಂಗಮ್ಮ ನನ್ನ ತಾಯಿ ಅವರು ಈಗ ತೀರಿಹೋಗಿದ್ದಾರೆ. 2 ನೇ ವಾದಿ ನನ್ನ ಅಕ್ಕ, 2 ರಿಂದ 8 ನೇ ವಾದಿಗಳು ಜೀವಂತವಾಗಿದ್ದಾರೆ. 2 ಮತ್ತು 3 ನೇ ವಾದಿಗಳು ನನಗಿಂತ ಹಿರಿಯರಾಗಿದ್ದು ಅವರಿಗೆ ನನಗಿಂತ ಚೆನ್ನಾಗಿ ಕುಟುಂಬದ ವ್ಯವಹಾರ ಗೊತ್ತಿರುತ್ತದೆ. ನಮ್ಮ ಪೂರ್ವಜರಾದ ರಘುಪತಿನಾಯಕ ತೀರಿಹೋಗಿ 70-80 ವರ್ಷವಾಗಿದೆ. ರಘುಪತಿನಾಯಕನಿಗೆ 4 ಜನ ಮಕ್ಕಳು ಅವರೆಂದರೆ ರಂಗನಾಯಕ, ರಘುಪತಿನಾಯಕ, ಗೋಪನಾಯಕ ಮತ್ತು ಕುಳ್ಳನಾಯಕ. ಈ 4 ಜನ ಈಗ ಬದುಕಿಲ್ಲ. ಅವರೆಲ್ಲರೂ ಮೃತಪಟ್ಟು ಅಂದಾಜು 50-60 ವರ್ಷಗಳಾಗಿವೆ.

ಸ.ನಂ.135 ಮತ್ತು 136 ರಲ್ಲಿ ರಘುಪತಿನಾಯಕರವರು ಎಷ್ಟು ವಿಸ್ತೀರ್ಣದ ಆಸ್ತಿ ಖರೀದಿಸಿದರುಎಂದರೆ ಎರಡು ಸೇರಿ 4 ಎಕರೆ 32 1/2 ಗುಂಟೆ ಜಮೀನು ಖರೀದಿಸಿದರು ಎಂದು ಸಾಕ್ಷಿ ನುಡಿಯುತ್ತಾರೆ. ಸ.ನಂ. 135 ಮತ್ತು 136 ರಲ್ಲಿ ಒಟ್ಟು ಎಷ್ಟು ಆಸ್ತಿ ಖರೀದಿಸಿದರು ಎಂದು ನನಗೆ ಗೊತ್ತಿಲ್ಲ. ಮೂಲಪುರಷ ರಘುಪತಿನಾಯಕ ಆಸ್ತಿ ಖರೀದಿಸಿದಾಗ ಆಸ್ತಿ ಪೋಡಾಗಿರಲಿಲ್ಲ. ಸ.ನಂ. 135 ರಲ್ಲಿ ಪೂರ್ವದ ಕಡೆ ತಿರುಗಾಡುವ ದಾರಿ, ಪಶ್ಚಿಮಕ್ಕೆ ನೀರು ಹರಿಯುವ ಹಳ್ಳ, ಉತ್ತರಕ್ಕೆ ಕೆ ರಂಗನಾಯಕನ ಜಮೀನು, ದಕ್ಷಿಣಕ್ಕೆ ಜವರದಾಸನಾಯಕರವರ ಜಮೀನು ಹಾಲಿ ಪುರುಷೋತ್ತಮರವರ ಜಮೀನು. ಸ.ನಂ. 136 ಕ್ಕೂ ಸಹ ಈ ಮೇಲೆ ಹೇಳಿದ ಚಕ್ಕುಬಂದಿಯಾಗಿರುತ್ತದೆ. ಉತ್ತರದ ಕಡೆ ಇರುವ ಕೆ ರಂಗನಾಯಕ ನಮ್ಮ ಕುಟುಂಬದ ಸಂಬಂಧಿ ಅಲ್ಲ. ಜವರದಾಸನಾಯಕರವರ ಆಸ್ತಿಯನ್ನು ನನ್ನ ಮುತ್ತಾತ ರಘುಪತಿನಾಯಕ ಖರೀದಿಸಿಲ್ಲ, ದಕ್ಷಿಣದ ಕಡೆ ಸ.ನಂ. 137 ಇರುತ್ತದೆ.

ನನ್ನ ಮುತ್ತಾತ ರಘುಪತಿನಾಯಕರವರು ಅವರು 1942 ರಲ್ಲಿ ಆಸ್ತಿ ಖರೀದಿಸಿದ ನಂತರ 50-60 ವರ್ಷ ಸ್ವಾಧೀನದಲ್ಲಿದ್ದರು.

ಅವರು ತಮ್ಮ ಹೆಸರಿಗೆ ಖಾತೆ ಮಾಡಿ ಕಂದಾಯ ಪಾವತಿಸುತ್ತಿದ್ದರು. ಈ ಬಗ್ಗೆ ದಾಖಲೆ ಹಾಜರು ಮಾಡಿದ್ದೇನೆ. ರಘುಪತಿನಾಯಕರವರು ಬದುಕಿದ್ದಾಗಲೇ ಅವರ ಮಕ್ಕಳಿಗೆ ದಾವಾ ಸ್ವತ್ತನ್ನು ವಿಭಾಗ ಮಾಡಿ ಕೊಟ್ಟರು. ರಘುಪತಿನಾಯಕರವರು ತಮ್ಮ ಮಕ್ಕಳಿಗೆ 1941-42 ರಲ್ಲಿ ಆಸ್ತಿ ವಿಭಾಗ ಮಾಡಿಕೊಟ್ಟರು. ಸ.ನಂ. 135 ಮತ್ತು 136 ರಲ್ಲಿ ದಾಸನಾಯಕನಿಗೆ ಅಂದರೆ 3 ನೆ ಮಗನಿಗೆ 3 ಎಕರೆ 25 ಗುಂಟೆ, ಉಳಿಕೆ ಜಮೀನಿನಲ್ಲಿ 2 ನೇ ಮಗ ರಂಗನಾಯಕನಿಗೆ 1 - 1/4 ಎಕರೆ ಬಂತು. 1941-42 ರಲ್ಲಿ ವಿಭಾಗವಾಯಿತು ಎನ್ನುವ ಬಗ್ಗೆ ವಿಭಾಗ ಪತ್ರ ಹಾಜರು ಮಾಡಿದ್ದೇನೆ. ಸಾಕ್ಷಿಯು ಮುಂದುವರಿದು 1944 ರಲ್ಲಿ ವಿಭಾವಾಯಿತು ಎಂದು ನುಡಿಯುತ್ತಾರೆ. ಉಳಿದ ಇಬ್ಬರು ಮಕ್ಕಳಿಗೆ ಉಳಿಕೆ ಜಮೀನಿನಲ್ಲಿ ವಿಭಾಗ ಕೊಟ್ಟರು ಅವುಗಳ ಸ.ನಂ. ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ.

ಸ.ನಂ.135 ಮತ್ತು 136 ರಲ್ಲಿ 1944 ರಲ್ಲಿ ವಿಭಾಗ ವಾದ ನಂತರ ದಾಸನಾಯಕ ಮತ್ತು ರಂಗನಾಯಕ ಆಸ್ತಿ ಯನ್ನು ಜಂಟಿ ಖಾತೆ ಮಾಡಿಸಿಕೊಂಡರು, ಯಾವ ವರ್ಷದಲ್ಲಿ ಎಂದು ಗೊತ್ತಿಲ್ಲ. ಆ ಬಗ್ಗೆ ಖಾತಾ ನಕಲನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ದಾಸನಾಯಕ 1978 ರಲ್ಲಿ ಮೃತಪಟ್ಟರು. ದಾಸನಾಯಕನಿಗೆ ಚಿಕ್ಕರಂಗನಾಯಕ ಎಂಬ ಒಬ್ಬನೇ ಗಂಡು ಮಗ. ದಾಸನಾಯಕ ಮೃತಪಟ್ಟ ನಂತರ ಅವರ ಒಬ್ಬನೆ ಮಗನಾದ ಚಿಕ್ಕರಂಗನಾಯಕನಿಗೆ ಹೋಯಿತು. ಚಿಕ್ಕರಂಗನಾಯಕ 1979-80 ರಲ್ಲಿ ಖಾತೆ ಮಾಡಿಸಿಕೊಂಡಿಲ್ಲ, 2006-07 ರಲ್ಲಿ ಖಾತೆ ಮಾಡಿಸಿಕೊಂಡರು. ಚಿಕ್ಕರಂಗನಾಯಕರವರಿಗೆ ಬಡತನ, ವಿದ್ಯಾವಂತರಲ್ಲದ ಕಾರಣ ಖಾತೆ ಮಾಡದೇ ಕಾಯುತ್ತಾ ಕುಳಿತರು. ಚಿಕ್ಕರಂಗನಾಯಕರವರು 1978-2006 ರವರಿಗೆ ಅನುಭೋಗದಲ್ಲಿದ್ದಾರೆ ಎನ್ನುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ಏನು ದಾಖಲೆ ಹಾಜರು ಮಾಡಿದ್ದೇನೆ ಎಂದರೆ ಕಂದಾಯ ರಶೀದಿ, ಕಂದಾಯ ಪಟ್ಟ ಇತ್ಯಾದಿ ದಾಖಲೆಗಳನ್ನು ಹಾಜರು ಮಾಡಿದ್ದೇನೆ. ನನ್ನ ತಂದೆಯಾದ ಚಿಕ್ಕರಂಗನಾಯಕ ಅವರ ತಂದೆ ಮೃತಪಟ್ಟ 1979 ರಿಂದ 2006 ರವರೆಗೆ ನನ್ನ ತಂದೆ ಅನುಭೋಗದಲ್ಲಿದ್ದಾರೆಎನ್ನುವ ಬಗ್ಗೆ ಕಂದಾಯ ದಾಖಲೆಗಳನ್ನು ಹಾಜರು ಮಾಡಿದ್ದೇನೆ. ಚಿಕ್ಕರಂಗನಾಯಕ 2016 ರಲ್ಲಿ ಮೃತಪಟ್ಟಿದ್ದಾರೆ.

ನಮ್ಮ ತಂದೆ ತಾಯಿಗೆ 8 ಜನ ಮಕ್ಕಳು, ಅವರೆಂದರೆ ವಾದಿ 2 ರಿಂದ 8 ಮತ್ತು ಮೃತ ಶಿವಮೂರ್ತಿ. ದಾವಾ ಆಸ್ತಿಯನ್ನು ನಾವು ವಿಭಾಗ ಮಾಡಿಕೊಂಡಿಲ್ಲ. ಚಿಕ್ಕರಂಗನಾಯಕ ಮರಣ ಹೊಂದಿದ ನಂತರ ದಾವಾ ಆಸ್ತಿ ಖಾತೆಯನ್ನು ನಮ್ಮಹೆಸರಿಗೆ ಖಾತೆ ಮಾಡಿಸಿಕೊಂಡಿಲ್ಲ ಆದರೆ ಕಂದಾಯ ಪಾವತಿ ಮಾಡಿದ್ದೇನೆ. ಬಡತನ ಮತ್ತು ಇತ್ಯಾದಿ ಕಾರಣದಿಂದಾಗಿ 2016 ರಿಂದಲೂ ಖಾತೆ ಮಾಡಿಸಿಕೊಂಡಿಲ್ಲ.

ದಾಸನಾಯಕ ಮತ್ತು ರಂಗನಾಯಕರವರು ಅಂದರೆ ರಘುಪತಿನಾಯಕರವರ ಮಕ್ಕಳು ಅವರ ಭಾಗಕ್ಕೆ ಬಂದ ನಂತರ ಪೋಡಿ ಮಾಡಿಸಿಕೊಂಡಿಲ್ಲ. ದಾಸನಾಯಕರ ಭಾಗಕ್ಕೆ ಬಂದ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆ: ತಿರುಗಾಡುವ ರಸ್ತೆ, ಪ: ನೀರುಹರಿಯುವ ಹಳ್ಳ, ಉ: ಪುಟ್ಟಚಿಕ್ಕಮ್ಮನವರ ಜಮೀನು ದ:ಮೃತ್ಯುಂಜಯ ರವರ ಜಮೀನು ಇದೆ. ರಂಗನಾಯಕವರ ಭಾಗಕ್ಕೆ ಬಂದ ಜಮೀನಿನ ಚಕ್ಕುಬಂದಿ ಪೂ:ತಿರುಗಾಡುವ ರಸ್ತೆ, ಪ:ನೀರು ಹರಿಯುವ ಹಳ್ಳ, ಉ: ಕೆ ರಂಗನಾಯಜಕರವರ ಜಮೀನು, ದ: ದಾಸನಾಯಕರವರ ಜಮೀನು. ವಿಭಾಗವಾಗಿ ಇದ್ದಾರೆ ಎನ್ನುವ ಬಗ್ಗೆ ದಾಖಲೆಹಾಜರು ಮಾಡಿದ್ದೇನೆ. ಸರ್ವೆ ಮಾಡಿಸಿ ಆ ದಾಖಲೆ ಹಾಜರು ಮಾಡಿದ್ದೇನೆ.

ಸ.ನಂ. 135 ಮತ್ತು 136 2006 ರಲ್ಲಿ ಪೋಡಾಯಿತು. ಆ ಪೈಕಿ ಸ.ನಂ. 135/2 ಮತ್ತು 136/2 ನನ್ನ ತಂದೆ ಪಾಲಿಗೆ ಬಂತು. ಅವರು ಜಮೀನುಯಾವ ರೀತಿ ಪೋಡಾಯಿತುಎಂದು ನನಗೆ ಗೊತ್ತಿಲ್ಲ. ನನ್ನ ವಾದ ಪತ್ರದಲ್ಲಿ 1979 ರಿಂದ 2016 ರವರೆಗೆ ಯಾವ ಕಾರಣಕ್ಕೆ ಖಾತೆ ಮಾಡಿಸಿಕೊಂಡಿಲ್ಲ ಎಂದು ಹೇಳಿದ್ದೆನಾ ಎಂದರೆ ಬರೆಸಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ವಾದ ಪತ್ರದ 5 ನೇ ಖಂಡಿಕೆಯಲ್ಲಿ ಬರೆದಿರುವಂತೆ ಕುಳ್ಳನಾಯಕನ ಮಗ ದಾಸನಾಯಕ ಎಂದರೆ ಸರಿ. ಕುಳ್ಳನಾಯಕ ನನ್ನ ಮುತ್ತಾತ, ದಾಸನಾಯಕ ನನ್ನ ತಾತ. ಕುಳ್ಳನಾಯಕ ಪೂರ್ವಜ ರಘುಪತಿನಾಯಕರವರ ಮಗ.

ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ನಂಜನಗೂಡು.